

# ಅಮೃತಹಳ್ಳಿಯಲ್ಲಿ ಬಂಡೆ ಗಾತ್ರದ ಗೆಣಸು

– ಡಾ. ಸತ್ಯನಾರಾಯಣ ಭಟ್ ಪಿ

ಇದೇನು ಉತ್ಪ್ರೇಕ್ಷೆ ಮಾತು ಎಂದಿರಾ? ಬರಾಬರಿ ೧೨ ಕಿಲೊ ತೂಗುವ ಸಿಹಿ ಗೆಣಸು. ಏನ ಇರುವುದು ಹೆಬ್ಬಾಳ ಮೇಲು ಸೇತುವೆಯ ಮುಂದೆ ಬಳ್ಳಾರಿ ಹೆದ್ದಾರಿಯಲ್ಲಿ ಒಂದು ಕಿ.ಮಿ. ದೂರ ಸಾಗಿ. ಬಲಗಡೆಯ ಒಂದು ಕಾಲದ ಪುಟ್ಟಹಳ್ಳಿ. ಇಂದು ಬಹು ಸುದ್ದಿಯಲ್ಲಿರುವ ಅರ್ಕಾವತಿ ಬಡಾವಣೆಯೆಂಬ ತಿಮಿಂಗಿಲದ ಗರ್ಭದಲ್ಲಿ ಒಂದು ಪುಟ್ಟ ತುಣುಕು. ಇಲ್ಲಿ ಒಂದು ಕಾಲದಲ್ಲಿ ಕೇವಲ ಬಂಡೆಗಲ್ಲಿನ ಬಂಜರು ಭೂಮಿ. ನೆಲ ಅಗೆದರೆ ಕಲ್ಲು ಬೆಣಚಿನ ವಿನಹ ಏನೇನೂ ಸಿಗದು. ಅಂತಹ ಬಂಡೆ ನೆಲದಲ್ಲಿ ಟೆನ್ ಬೈ ಟೂ ನಲ್ಲಿ ಹೆಚ್ಚಿದರೆ ಹಂಡೆ ತುಂಬ ಬಂಡೆಗಾತ್ರದ ಸಿಹಿಗೆಣಸು ಬೆಳೆದವರ ಸಾಧನೆ ಹೊಗಳಲೇ ಬೇಕಲ್ಲವೆ?





ಅಂದ ಹಾಗೆ ಕೆಲವು ಕೃಷಿ ಪಂಡಿತರು ಈ ಗಾತ್ರ ಕಂಡು ಇದೇನೂ ಅಚ್ಚರಿ ಮಾತಲ್ಲ . ಹೀಗೆ ಕುಂಬಳ ಗಾತ್ರದ ಗೆಣಸು ಬೆಳೆವುದು ಸಹಜ ಆದರೆ ಅದು ಏನೂ ರುಚಿ ಕಾಣದ ಗೆಡ್ಡೆ ಅಂದರು. ಹಾಗೆಂದು ಈ ಸಿಹಿ ಗೆಣಸು ಕತ್ತರಿಸಿ ಬೇಯಿಸಿ ನೋಡಿದ್ದು ಸಹ

ಆಯಿತೆನ್ನಿ. ಎಂತಹ ಸವಿ ಎನ್ನುತ್ತೀರಿ. ಸಿಹಿ ಗೆಣಸು ಕೇವಲ ಸಂಕ್ರಾಂತಿ ಹಬ್ಬಕ್ಕೆ ಮಾತ್ರ ಬೇಯಿಸುವ ಪರಿಪಾಠ ಕೆಲವೆಡೆ ಇದೆ. ಹಗೆ ಆಗಬೇಕಿಲ್ಲ. ಎಲ್ಲ ವರ್ಗದ ಜನ ಖುಷಿ ಪಟ್ಟು ತಿನ್ನಬಹುದಾದ ಈ ಗೆಡ್ಡೆ ನಮ್ಮ ನೆಲದ ಆಹಾರ. ಐಪೊಮಿಯಾ ಬಟಾಟಾಸ್ ಎಂಬ ಹೆಸರಿನ ಈ ಗೆಡ್ಡೆ ಆಯುರ್ವೇದ ಗ್ರಂಥಗಳಲ್ಲಿ ಉಲ್ಲೇಖವಿದೆ. ಸಾವಿರ  ವರ್ಷದ ಹಿಂದೆ ಆಲುಕ ಎಂಬ ಹೆಸರಿನಡಿ ಬಳಕೆ ಅಗುತ್ತಿದ್ದ ಆಹಾರ ವಸ್ತು ಇದು. ನಮ್ಮ ಪೂರ್ವಿಕರು ದೇಹದ ಬಲ ಗಾತ್ರ ಮತ್ತು ಧಾತು ಹೆಚ್ಚಿಸಲು ಸಿಹಿ ಗೆಣಸು ಬಳಸುತ್ತಿದ್ದರು. ಹಸಿ ಅಥವಾ ಬೇಯಿಸಿದ ಅಡಿಗೆಗೆ ಬಹಳ ಸ್ವಾದ. ಗೆಣಸಿನ ಚಿಪ್ಸ್ ಸಹ ಎಲ್ಲರಿಗೆ ಪ್ರಿಯ. ಬೋಂಡ ಬಜ್ಜಿಗೆ ಒದಗುವ ತರಕಾರಿ ಇದು. ನಗರದ ಜನರು ಸಹ ತಮಗೆ ಸಿಗುವ ಕಡಿಮೆ ಜಾಗದಲ್ಲಿ ಮುತುವರ್ಜಿಯಿಂದ ಈ ತರಕಾರಿ ಬೆಳೆಸಬಹುದು.

***